<u>ಸಾಕ್ಷಿಯನ್ನು ದಿಃ 04.03.2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು</u>

<u>ಪಾಟೀಸವಾಲು 1 ನೇ ಪ್ರತಿವಾದಿ ಪರ ಶ್ರೀ ಕೆ ಎಂ ವಿ ವಕೀಲರಿಂದಃ</u>

ನಾನು ಐ ಟಿ ಐ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 1 ನೇಪ್ರತಿವಾದಿಯನ್ನು ನೋಡಿರುತ್ತೇನೆ. ಭೀಮಣ್ಣ ನನ್ನ ತಂದೆ. ನನ್ನ ಅಜ್ಜನ ಹೆಸರು ಪಾಪಣ್ಣ. ಅವರನ್ನು ಚಿನ್ನಯ್ಯ ಎಂದು ಕರೆಯುತ್ತಾರೆಂದರೆ ಸರಿಯಲ್ಲ. 1 ನೇಪ್ರತಿವಾದಿ ನನ್ನ ತಂದೆಯವರ ವಿರುದ್ದ ಒಎಸ್ ನಂ 171/2009 ರಂತೆ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ತಂದೆಯವರ ಪರವಾಗಿ ಕೆ ವಿ ಜೆ ಮತ್ತು ಕೆ ಜೆ ಆರ್ ವಕೀಲರು ಪ್ರಕರಣ ನಡೆಸಿದ್ದರು ಎಂದರೆ ಸರಿ. ಸದರಿ ಪ್ರಕರಣ 1 ನೇಪ್ರತಿವಾದಿ ಪರ ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ತೀರ್ಮಾನವಾದ ನಂತರ ನನ್ನ ತಂದೆ ಮರಣ ಹೊಂದಿದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ದಿಃ 23.10.2012 ರಂದು ಮರಣ ಹೊಂದಿರುತ್ತಾರೆ. ನನ್ನ ತಂದೆಯವರು ಮರಣ ಹೊಂದಿದ ನಂತರ ನಾನು, ನನ್ನ ತಾಯಿ ಮತ್ತು ನನ್ನ ಸಹೋದರಿ ಸೇರಿ ಸದರಿ ಪ್ರಕರಣವನ್ನು ಪುನಃ ವಿಚಾರಣೆಗೆ ತೆಗೆದುಕೊಳ್ಳಬೇಕೆಂದು ಮಿಸ್ ಪ್ರಕರಣ ದಾಖಲಿಸಿದ್ದೆವು ಎಂದರೆ ಸರಿ. ಸದರಿ ಮಿಸ್ ಪ್ರಕರಣ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ಏನಾಗಿದೆ ಎಂದು ನಮ್ಮ ವಕೀಲರ ಬಳಿ ಕೇಳಿ ತಿಳಿದುಕೊಂಡಿರುವುದಿಲ್ಲ. ಸದರಿ ಪ್ರಕರಣ ವಜಾ ಆದ ವಿಚಾರ ನನಗೆ ಗೊತ್ತಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಪ್ರಕರಣದ ವಿಚಾರಗಳನ್ನು ಮರೆಮಾಚಿ ಈ ಪ್ರಕರಣ ದಾಖಲಿಸಿದ್ದೇವೆಂದರೆ ಸರಿಯಲ್ಲ.

1 ನೇಪ್ರತಿವಾದಿಯ ಅಜ್ಜ ನಲ್ಲಣ್ಣ ನನಗೆ ಗೊತ್ತಿಲ್ಲ. ಸದರಿಯವರಿಗೆ 3 ಜನ ಮಕ್ಕಳು. ಅವರೆಂದರೆ ಮುನಿಯಪ್ಪ, ಚಿನ್ನಪ್ಪ ಮತ್ತು ಮುನಿವೆಂಕಟಪ್ಪ ಎಂದರೆ ನನಗೆ ಗೊತ್ತಿಲ್ಲ. ಮುನಿಯಪ್ಪನ ಹೆಂಡತಿ ಮುನಿಯಕ್ಕನನ್ನು ನೋಡಿರುವುದಿಲ್ಲ. ಸದರಿ ಮುನಿಯಕ್ಕ ರವರಿಗೆ ಸರ್ಕಾರದಿಂದ ಜಾಗ ಮಂಜೂರಾಗಿತ್ತು ಎಂದರೆ ಸರಿಯಲ್ಲ. ಮುನಿಯಕ್ಕನಿಗೆ ಮಂಜೂರಾದ ಜಾಗ ಬೇತಮಂಗಳ ಪಂಚಾಯ್ತಿಯಲ್ಲಿನ ಜಾಗ ಎಂದರೆ ಸರಿಯಲ್ಲ. ಸದರಿ ಮುನಿಯಕ್ಕ ಅವರ ಗಂಡ ಮುನಿಯಪ್ಪ 1 ನೇಪ್ರತಿವಾದಿಯ ಮನೆಯಲ್ಲಿದ್ದರು ಎಂದರೆ ಸರಿಯಲ್ಲ. ಸದರಿಯವರ ಮರಣ ನಂತರ ಅವರ ಸ್ವತ್ತು 1 ನೇಪ್ರತಿವಾದಿಗೆ ಬಂದಿದೆ ಎಂದರೆ ಸರಿಯಲ್ಲ. ಮುನಿಯಕ್ಕ ರವರು ಸ್ವಾಧೀನ ಇದ್ದ ನಿವೇಶನದ ದಾಖಲಾತಿಗಳು ಅವರ ಹೆಸರಿನಲ್ಲಿದ್ದು ಅವರೇ ಕಂದಾಯ ಪಾವತಿ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ಬೇತಮಂಗಲ ಗ್ರಾಮದ ವಿ ಪಿ ಖಾತಾ ಸಂ 36 ಮತ್ತು 37 ಆಸ್ತಿಗೂ ನಮಗೂ ಸಂಬಂಧ ಇಲ್ಲ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನಾವು ಸ್ವಾಧೀನ ಇಲ್ಲ ಎಂದರೆ ಸರಿ. ಸದರಿ ಆಸ್ತಿಯ ವಿಸ್ತೀರ್ಣ 50 ಇಂಟೂ 50 ಅಡಿಗಳ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ತಂಜಮ್ಮ ಮತ್ತು ಪೊಲ್ಲಾಚಪ್ಪ

ರವರ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಲಾಚಪ್ಪ ರವರ ಮನೆ ಇರುತ್ತದೆ ಈ ಚೆಕ್ಕುಬಂದಿಯ ಆಸ್ತಿಗೂ ನನಗೂ ಸಂಬಂಧ ಇಲ್ಲ ಎಂದರೆ ಸರಿ.

ಈ ದಾವೆಯನ್ನು 1 ನೇಪ್ರತಿವಾದಿಯ ವಿರುದ್ದ ಯಾವ ಕಾರಣಕ್ಕೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು 1 ನೇಪ್ರತಿವಾದಿಯು ಆಸ್ತಿ ನಮ್ಮದ್ದು ಎಂದು ನಮ್ಮ ತಂದೆಗೆ ಹೇಳಿದ್ದರಿಂದ ಈ ದಾವೆ ಸಲ್ಲಿಸಿರುತ್ತೇನೆ. ನಮ್ಮ ತಂದೆಗೆ ಯಾವಾಗ ಹೇಳಿದ್ದರೆಂದು ನನಗೆ ಗೊತ್ತಿಲ್ಲ. ಯಾರ ಸಮಕ್ಷಮ ಹೇಳಿದ್ದಾರೆಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಈ ದಾವೆ ಸಲ್ಲಿಸುವ 8 ವರ್ಷ ಪೂರ್ವದಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆ ಮರಣ ಹೊಂದುವ ಎಷ್ಟು ವರ್ಷ ಪೂರ್ವದಲ್ಲಿ 1 ನೇಪ್ರತಿವಾದಿ ಹೇಳಿದ್ದಾರೆಂದು ನನಗೆ ಗೊತ್ತಿಲ್ಲ. 1 ನೇಪ್ರತಿವಾದಿ ನನ್ನ ತಂದೆಯನ್ನು ಹೇಳಿದಾಗ ನನ್ನ ತಂದೆ ಅವರ ವಿರುದ್ದ ಪ್ರಕರಣ ದಾಖಲಿಸಿಲ್ಲ ಎಂದರೆ ಸಾಕ್ಷಿಯು 1 ನೇಪ್ರತಿವಾದಿ ನನ್ನ ತಂದೆಗೆ ಹೇಳಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಜೀವಂತ ಇದ್ದಾಗ 1 ನೇಪ್ರತಿವಾದಿಯ ವಿರುದ್ದ ದಾವೆ ಸಲ್ಲಿಸಿರುವುದಿಲ್ಲ. ನಮ್ಮ ತಂದೆ ಜೀವಂತ ಇದ್ದಾಗ 1 ನೇಪ್ರತಿವಾದಿ ಹೇಳಿದ್ದನ್ನು ಮನಸ್ಸಿನಟ್ಟಿಕೊಂಡು ಈಗ ಈ ದಾವೆ ಸಲ್ಲಿಸಿದ್ದೇವೆಂದರೆ ಸರಿಯಲ್ಲ. 1 ನೇಪ್ರತಿವಾದಿಯು ಯಾವ ದಿನಾಂಕದಂದು ನಮ್ಮ ಸ್ವಾಧೀನವನ್ನು ಪ್ರಶ್ನಿಸಿದರು ಎಂದು ಹೇಳಲಾಗುವುದಿಲ್ಲ.

ಸಾಕ್ಷಿಗೆ 1 ನೇಪ್ರತಿವಾದಿಯು ಅವರ ತಂದೆಯ ವಿರುದ್ದ ದಾಖಲಿಸಿದ ಪ್ರಕರಣದ ವಾದಪತ್ರದ ದೃಢೀಕೃತ ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ 2 ನೇಪ್ರತಿವಾದಿಯೂ ಕೂಡ ಪಕ್ಷಗಾರರಾಗಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ 2 ನೇಪ್ರತಿವಾದಿ ತಕರಾರು ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ 1 ನೇಪ್ರತಿವಾದಿಯು ಸಲ್ಲಿಸಿರುವ ತಕರಾರಿನ ಬಗ್ಗೆ ನಾನು ತಿಳಿದುಕೊಂಡಿಲ್ಲ. ವಕೀಲರ ಮೂಲಕ ಸದರಿ ತಕರಾರಿನ ಬಗ್ಗೆ ಕೇಳಿ ತಿಳಿದುಕೊಂಡಿರುತ್ತೇನೆ. ಸದರಿ ತಕರಾರಿನಲ್ಲಿ ಮುನಿಯಕ್ಕನಿಂದ 1 ನೇಪ್ರತಿವಾದಿ ಆಸ್ತಿಯನ್ನು ಪಡೆದು ಸ್ವಾಧೀನದಲ್ಲಿರುವ ಬಗ್ಗೆ ದಾಖಲಾತಿಗಳಿರುವ ಬಗ್ಗೆ ಬರೆದ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ಸದರಿ ದಾಖಲಾತಿಗಳು ಸರಿ ಇರುವ ಬಗ್ಗೆ ನಾನು ಪರಿಶೀಲನೆ ಮಾಡಿರುವುದಿಲ್ಲ. ಸದರಿ ದಾಖಲಾತಿಗಳು ಸರಿ ಇಲ್ಲ ಎಂದು ಯಾವುದೇ ಪ್ರಕರಣ ದಾಖಲಿಸಿ ಪ್ರಶ್ನಿಸಿರುವುದಿಲ್ಲ. ಸದರಿ ದಾಖಲಾತಿಗಳು ಸರಿ ಇರುವ ಕಾರಣ ನಾನು ಅವುಗಳನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳನ್ನು ಸರಿ ಇಲ್ಲ ಎಂದು ಪ್ರಶ್ನಿಸಿದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈ ಕುರಿತು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಂಚಾಯ್ತಿಯಲ್ಲಿ ಇ ಸ್ವತ್ತು ದಾಖಲಾತಿಯನ್ನು 2000 ನೇ ಇಸವಿ ಇಂದ ಮಾಡುತ್ತಿದ್ದಾರೆಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಇ ಸ್ವತ್ತು ದಾಖಲಾತಿಯನ್ನು ಹಾಜರುಪಡಿಸಿಲ್ಲ

ಎಂದರೆ ಸರಿ. ದಾವಸ್ವತ್ತಿಗೂ ನಾನು ಹಾಜರುಪಡಿಸಿರುವ ದಾಖಲಾತಿಗಳಿಗೂ ಹಾಗೂ ನಾನು ಸ್ವಾಧೀನ ಇಲ್ಲದೇ ಇರುವುದರಿಂದ ಇ ಸ್ವತ್ತು ದಾಖಲಾತಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಸ್ವತ್ತನ್ನು ಕಬಳಿಸುವ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿನ ವಿಚಾರಗಳನ್ನು ನಾನೇ ಹೇಳಿ ಬರೆಸಿರುವುದಿಲ್ಲ.

ಮರುವಿಚಾರಣೆಃ ಇಲ್ಲ.

(2 ನೇಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಅನುಮತಿಸಿ ನೀಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

(ಮಂಜುನಾಥ. ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಅಪರ ಜೆ ಎಂ ಎಫ್ ಸಿ, ಕೆ ಜಿ ಎಫ್